'ನನಗೂ ನೆನಪಿದೆ. ನೀನೂ ನೆನಪಾಗುತ್ತಿದ್ದೀಯಾ... ಆದರೆ ಅದು ಬಹಳ ಹಿಂದಿನ ಸಂಗತಿ ಆಯಿತು.' ಅವಳ ದನಿ ಮತ್ತೆ ಕಠಿಣವಾಯಿತು. 'ಟ್ಯಾಕ್ಸಿ ಸಂಖ್ಯೆ ಕ್ರೆಸ್ಟ್ ವುಡ್ 8484.'

ಅವನು ವಿಮಾನನಿಲ್ದಾಣಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ತನ್ನ ತಲೆಯನ್ನು ಆ ಬದಿಯಿಂದ ಈ ಬದಿಗೆ ಅಲ್ಲಾಡಿಸಿದನು. ಈಗ ಅವನು ಸಂಪೂರ್ಣವಾಗಿ ಒಬ್ಬನೇ ಆಗಿದ್ದನು. ಆದರೆ ಈ ಅನುಭವವನ್ನು ಅವನಿಗೆ ಜೀರ್ಣಿಸಿಕೊಳ್ಳಲು ಸಾಧ್ಯವಾಗಲಿಲ್ಲ. ವಿಮಾನವು ಕಪ್ಪು ಆಕಾಶದಲ್ಲಿ ಘರ್ಜಿಸುತ್ತಾ ಹೋಗುತ್ತಿದ್ದಂತೆ ಅದರಲ್ಲಿನ ಪ್ರಯಾಣಿಕರು ಮತ್ತು ಕೆಳಗಿನ ಕಾರ್ಪೋರೇಟ್ ಜಗತ್ತಿನ ಪ್ರಯಾಣಿಕರದು ಬೇರೆಯೇ ಪ್ರಪಂಚವಾಗಿತ್ತು ಎಂಬುದನ್ನೂ, ಈ ಎರಡು ಹಾರಾಟದಲ್ಲಿ ಒಂದು ಸಮಾನ ಅಂಶವನ್ನು ಅವನು ಮೂಡಿಸಲು ಸಾಧ್ಯವಾಯಿತು. ಕುರುಡಾದ ಆ ಐದು ನಿಮಿಷಗಳಲ್ಲಿ ಎರಡು ಜಗತ್ತುಗಳಲ್ಲಿ ಅವನು ಒಬ್ಬ ಹುಚ್ಚನಂತೆ ಬದುಕಿದ್ದ. ಏಕಕಾಲದಲ್ಲಿ ಹನ್ನೆರಡು ವರ್ಷದ ಹುಡುಗ ಮತ್ತು ಮುವತ್ತೆರಡು ವರ್ಷದ ಮನುಷ್ಯನಾಗಿ ಪರಿಹಾರ ಕಾಣದ ಮತ್ತು ಅಸಹಾಯಕ ಸ್ಥಿತಿ ಒಂದಕ್ಕೊಂದು ಸೇರಿಕೊಂಡಂತೆ ಜೀವಿಸಿದ್ದನು,

ಡೊನಾಲ್ಡ್ ಎರಡು ವಿಮಾನಯಾನಗಳ ನಡುವಿನ ಸಮಯದಲ್ಲಿ –ಒಂದು ಒಳ್ಳೆಯ ವ್ಯವಹಾರ ಮತ್ತು ಸಂಬಂಧವನ್ನು ಕಳೆದುಕೊಂಡಿದ್ದನು. ಆದರೆ ಬದುಕಿನ ಎರಡನೆಯ ಭಾಗವು ಸಂಗತಿಗಳಿಂದ ಕಳಚಿಕೊಳ್ಳುವ ಒಂದು ದೀರ್ಘವಾದ ಪ್ರಕ್ರಿಯೆ. ಬಹುಶಃ ಆ ಹಂತದ ಅನುಭವದಿಂದ ಏನೂ ಆಗುವುದಿಲ್ಲ.

## ಎಫ್. ಸ್ಕಾಟ್ ಫಿಟ್ಸ್ ಜೆರಾಲ್ಡ್

ಅಮೆರಿಕದ ಕಾದಂಬರಿಕಾರ ಮತ್ತು ಸಣ್ಣಕಥೆಗಾರ ಫಿಟ್ಸ್ ಜೆರಾಲ್ಡ್ (1896 – 1940) ತನ್ನ ಜೀವಿತಾವಧಿಯಲ್ಲಿ ಹೆಚ್ಚಿನ ಹೆಸರನ್ನು ಗಳಿಸದಿದ್ದರೂ ಇಪ್ಪತನೇ ಶತಮಾನದ ಮಹತ್ವದ ಬರಹಗಾರನೆಂಬ ಖ್ಯಾತಿಯನ್ನು ಗಳಿಸಿದ್ದಾನೆ. 'ದಿ ಸೈಡ್ ಆಫ್ ಪ್ಯಾರಡೈಸ್', 'ದಿ ಬ್ಯೂಟಿಫುಲ್ ಅಂಡ್ ದಿ ಡ್ಯಾಮ್ ನ್ಡ್', 'ದಿ ಗ್ರೇಟ್ ಗ್ಯಾಟ್ ಸ್ ಬಿ',ಮತ್ತು 'ಟೆಂಡರ್ ಈಸ್ ದಿ ನೈಟ್' ಎಂಬ ನಾಲ್ಕು ಕಾದಂಬರಿಗಳನ್ನು ಬರೆದಿದ್ದ. ಐದನೆಯ ಅಪೂರ್ಣ ಕಾದಂಬರಿ 'ದಿ ಲಾಸ್ಟ್ ಟೈಕೂನ್' ಅವನ ಮರಣಾನಂತರ ಪ್ರಕಟವಾಯಿತು. ಈತ ಹಲವಾರು ಸಣ್ಣಕಥೆಗಳನ್ನು ಬರೆದಿದ್ದಾನೆ. ಇವನು ಅಲಾಬಾಮಾ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಮಗಳು, ಕಾದಂಬರಿಗಾರ್ತಿ ಜೆಲ್ಡಾಳನ್ನು ಪ್ರೀತಿಸಿ ಮದುವೆಯಾದ್ದ.

## ಕೆ. ಪದ್ಮಾಕ್ಷಿ

ವಾಸ ಮತ್ತು ವಿದ್ಯಾಭ್ಯಾಸ ಶಿವಮೊಗ್ಗದಲ್ಲಿ. ಮೈಸೂರು ವಿಶ್ವವಿದ್ಯಾಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯಿಂದ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮತ್ತು ಪತ್ರಿಕೋದ್ಯಮದಲ್ಲಿ ಡಿಪ್ಲೋಮಾ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.